

# ‘ವಿಷಯ ತಿಳಿಯಿತು...’

ವಿಷಯ ತಿಳಿಯಿತು ನೀನು
ಹೋಗಿ ಮುಟ್ಟಿದೆಯೆಂದು
ನನಗೀಗ ನಿರಾಳ ಭಾವ.
ನೀನು ಹೊರಟ ಕ್ಷಣಕ್ಕೇ
ತಳಮಳಿಸಿತ್ತಿಲ್ಲಿ ಜೀವ

ಹರೆಯ ಇನ್ನೂ ಬರದವಳೆ,
ನಡು ಹರೆಯದ ನಡೆಯವಳೇ,
ಹರೆಯದ ಕಾಲ ಕಳೆದವಳೇ...
ನೀನು ಸುರಕ್ಷಿತವಾಗಿ ಹೋಗಿ
ಮುಟ್ಟಿದ ವಿಷಯ ತಿಳಿದು ನನ್ನ
ಮನವು ತಿಳಿಯಾಯ್ತು

ಹೊಂಚು ಹಾಕುವ, ಸಂಚು
ಮಾಡುವ ಹಲವು ಕೆಲವು
ದಾರಿ ದೆಯ್ಯಗಳೂ ಹಾದಿ
ನಡುವಣ ಆಪತ್ತುಗಳೂ ನಿನಗೆ
ಎದುರಾಗಲಿಲ್ಲವೆಂದು ತಿಳಿದು
ಅಂತೂ ಸಮಾಧಾನವಾಯ್ತು.

ಮನೆ ಒಳಗಿನ ರಾಹು,
ಹೊಸ್ತಿಲ ಹೊರಗಿನ ಕೇತುಗಳು ನಿನ್ನ
ಮೇಲೇರಲು ಕಾಯ್ವ ಶನಿಗಳು;
ಕಾದು ಕಾದು ಕುದಿಯುತ್ತಿರುವಾಗ
ನೀನು ಹೋಗಿ ಮುಟ್ಟಿರುವ ವಿಷಯ
ತಿಳಿದು ಸಮಾಧಾನವಾಯ್ತು.

ಆದಕೆ, ನಿನ್ನ ಮನಕೆ ಏನೇನೂ
ಘಾಸಿಯಾಗದಂತೆ ನೀನು ಮುಟ್ಟಿರುವೆ
ಎನ್ನುವುದನು ನಾನು ರವಷ್ಟೂ
ನಂಬಲಾರೆ. ಇರಲಿ, ನೀನೀಗ
ಗಮ್ಯ ತಲುಪಿರುವೆ. ವಿಷಯ ತಿಳಿದು
ಈ ಇರುಳಾದರೂ ನೆಮ್ಮದಿಯಲಿ
ನಿದ್ರೆಗೆ ಹೋಗಲು ಪ್ರಯತ್ನಿಸುವೆ.

● **ವಸುಂಧರಾ ಕದಲೂರು**

ಕಲೆ: ವಾಗೀಶ ಹೆಗಡೆ

